ದೇವಸ್ಥಾನಗಳ ಜೀರ್ಣೋದ್ಧಾರ.

161(157) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1 ರಾಜ್ಯದಲ್ಲಿ 1998-99ನೇ ಸಾಲಿನಲ್ಲಿ ಬಾಕಿ ಉಳಿದಿರುವ ಹಣವನ್ನು ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಯಾವಾಗ ಬಿಡುಗಡೆ ಮಾಡಲಾಗುವುದು ಬಾಕಿ ಉಳಿದಿರುವ ಹಣ ಎಷ್ಟು;

2 ಈಗಾಗಲೇ ಸರ್ಕಾರದಿಂದ ಅನುದಾನಕ್ಕಾಗಿ ಬಿಡುಗಡೆ ಕೋರಿ ಬಂದ ಅರ್ಜಿಗಳೆಷ್ಟು ; ಹಾಗೂ ಬಾಕಿ ಇರುವ ಅರ್ಜಿಗಳೆಷ್ಟು (ವಿವರ ನೀಡುವುದು).

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

ಅ) 1998-99ನೇ ಸಾಲಿಗೆ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಆಯವ್ಯಯದಲ್ಲಿ ರೂ. 1,26,00,000-00 ಒದಗಿಸಲಾಗಿದೆ. ಈ ಹಣವನ್ನು ಸದ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು, ಆದರಿಂದಾಗಿ ಬಾಕಿ ಹಣದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 1998-99ನೇ ಸಾಲಿನಲ್ಲಿ ಸರ್ಕಾರದ ಅನುದಾನ ಕೋರಿ ಬಂದ ಒಟ್ಟು ಪ್ರಸ್ತಾವನೆಗಳ ಸಂಖ್ಯೆ : 268 ಎಲ್ಲವು ಸದ್ಯಕ್ಕೆ ಬಾಕಿ ಇರುವುದು.

ಗುಬ್ಬಿ ಕ್ಷೇತ್ರಕ್ಕೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು.

162(24) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಬ್ಬಿ ಕ್ಷೇತ್ರದಲ್ಲಿ 95-96 ರಿಂದ ಇಲ್ಲಿಯವರೆಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು;

ಆ) ಇದಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಬಿಡುಗಡೆಯಾದ ಹಣದಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ಉಳಿದಿದೆ? (ಪೂರ್ಣ ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಮಂಜೂರಾದ ಮನೆಗಳ ಸಂಖ್ಯೆ ಈ ಕೆಳಕಂಡಂತಿದೆ

1995-96	-	367
1996-97	-	172
1997-98	-	275
1998-99	-	737

ಆ) ಇದಕ್ಕೆ ಬಿಡುಗಡೆಯಾದ ಹಣ ಈ ಕೆಳಕಂಡಂತಿದೆ.

1995-96	-	61.540	ಲಕ್ಷ
1996-97	-	28.380	ಲಕ್ಷ
1997-98	-	39.050	ಲಕ್ಷ
1998-99	-	6.600	ಲಕ್ಷ

ಇ)

ವರ್ಷ	ಲಕ್ಷಗಳಲ್ಲಿ ಖರ್ಚಾದ ಹಣ	ಲಕ್ಷಗಳಲ್ಲಿ ಉಳಿಕೆ ಹಣ
1995-96	59.870	1.670
1996-97	28.380	--
1997-98	31.550	7.500
1998-99	-	6.600

ಸರಕಾರಿ ಜಮೀನು ಖಾಸಗಿ ಸಂಸ್ಥೆಗಳಿಗೆ ಪರಭಾರೆ ಮಾಡಿರುವುದು.

163(118) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ತಾಲ್ಲೂಕಿನ ಮಾವಿನಕುರ್ವೆ ಪಂಚಾಯತ್ ವ್ಯಾಪ್ತಿಯ ಕರಿಕಲ್ ಗ್ರಾಮದ ಸರ್ವೆ ನಂ.258ರಲ್ಲಿ ತಲಗೊಡದಲ್ಲಿ ಶಾಲೆ ಪ್ರಾರಂಭಿಸಲು ಖಾಸಗಿ ಸಂಸ್ಥೆಯವರಿಗೆ ಅನುಮತಿ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಖಾಸಗಿ ಸಂಸ್ಥೆಯವರಿಗೆ ಈ ಉದ್ದೇಶಕ್ಕಾಗಿ ಮಂಜೂರು ಮಾಡಲಾದ ಜಮೀನಿನ ವಿಸ್ತೀರ್ಣ ಎಷ್ಟು;